<u>ದಿನಾಂಕ **06.02.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>

ಅಪಘಾತ ಪಡಿಸಿದ ವಾಹನದ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿದೆ ಎಂದರೆ ನಿಜ. ವಾಹನ ಮತ್ತು ಚಾಲಕನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆಂದರೆ ನಿಜ. ಸದರಿ ಪ್ರಕರಣದಲ್ಲಿ ಐ ಎಂ ವಿ ವರದಿಯನ್ನು ಸಲ್ಲಿಸಿದ್ದಾರೆಂದರೆ ನಿಜ. ಸದರಿ ವರದಿಯಲ್ಲಿ ವಾಹನದ ಜಖಂ ಬಗ್ಗೆ ತಿಳಿಸಿದ್ದಾರೆಂದರೆ ನಿಜ. ದೂರು ನೀಡಲು ತಡವಾದ ಬಗ್ಗೆ ದೂರಿನಲ್ಲಿ ತಿಳಿಸಿದ್ದಾರೆಂದರೆ ನಿಜ. ವಾಹನವನ್ನು ಪ್ರಕರಣದಲ್ಲಿ ಸಿಲುಕಿಸಿದ್ದಾರೆನ್ನುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ದೋಷಾರೋಪಣಾ ಪಟ್ಟಿ ಯಲ್ಲಿ ವಾಹನ ಭಾಗಿಯಾಗಿಲ್ಲ ಎಂದು ತಿಳಿಸಿಲ್ಲ. ಶ್ರೀಧರ್ ಎನ್ನುವವರು ವಾಹನವನ್ನು ಚಾಲನೆ ಮಾಡುತ್ತಿದ್ದರು. ಅವರ ಪೂರ್ಣ ವಿಳಾಸ ಗೊತ್ತಿಲ್ಲ. ವಿಳಾಸ ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೇವೆ. ಸ್ಥಳೀಯರನ್ನು ವಿಚಾರ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ವಿಚಾರ ಮಾಡಿರುತ್ತೇವೆ. ವಾಹನದ ಮಾಲೀಕರು ಸಾಕ್ಷಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಆಂತರಿಕ ತನಿಖೆಯಲ್ಲಿ ಹೇಳಿದ್ದಾರೆಂದು ಗೊತ್ತಿದೆ. ತನಿಖೆ ಮಾಡಿದವರು ಸಹಿ ಪಡೆದಿಲ್ಲ ಆದರೆ ವಿಡಿಯೋ ಮಾಡಿರುತ್ತಾರೆ. ತನಿಖೆಗೆ ಒಳಪಡಿಸಿದವರ ಅನುಮತಿ ಪಡೆದಿರುತ್ತೇವೆ. ದೋಷಾರೋಪಣಾ ಪಟ್ಟಿ ಯಲ್ಲಿ ತಿಳಿಸಿರುವ ವಾಹನಕ್ಕೆ ನಮ್ಮ ಕಂಪನಿಯ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ನಿಜ. ಆಂತರಿಕ ತನಿಖೆ ಮಾಡಿಲ್ಲ ಎಂದರೆ ಸುಳ್ಳು. ಯಾವುದೆ ವೀಡಿಯೋ ಮಾಡಿಲ್ಲ ಎಂದರೆ ಸುಳ್ಳು. ಹೇಳಿಕೆ ಮತ್ತು ಧ್ವನಿ ಅವರದಲ್ಲ ಎಂದರೆ ಸುಳ್ಳು.ನಮ್ಮ ವಿಮಾ ಕಂಪನಿಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.